**<u>ಸಾಕ್ಷಿಯನ್ನು ದಿಃ06.06.2022 ರಂದು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ. ವಕೀಲರಿಂದ</u>**

3. ಮೃತ ಶ್ರೀನಿವಾಸ್ ಈತ ಬೆಂಗಳೂರಿನಲ್ಲಿ ವಾಸ ಇದ್ದ. ಆತ ವಾಸ ಇದ್ದ ಸ್ಥಳದಿಂದ 50 ಕಿ.ಮೀ. ದೂರದಲ್ಲಿ ನನ್ನ ಊರು ಇದೆ. ಪೊಲೀಸರು ತನಿಖೆಗೆ ಬರುವಂತೆ ನೋಟಿಸ್ ಕೊಟ್ಟಿಲ್ಲ. ಶ್ರೀನಿವಾಸ ಮೃತವಾದ 8 ತಿಂಗಳ ನಂತರ ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ. ಸಾಕ್ಷಿದಾರರು ಮುಂದುವರೆದು ಹೇಳುವುದು ಹೈಕೋರ್ಟ್‌ದಿಂದ ಆರ್ಡರ್ ಆದ ಮೇಲೆ ಪೊಲೀಸರು ತನಿಖೆ ಮಾಡಿದ್ದಾರೆ. ಬಾಡಿಯನ್ನು ತೆಗೆಯುವಾಗ ನನ್ನನ್ನು ಕರೆದುಕೊಂಡು ಹೋಗಿದ್ದರು. ಮೃತನು ಹೇಗೆ ಸತ್ತ ಎಂದು ನಾನು ಖುದ್ದಾಗಿ ನೋಡಿಲ್ಲ. ಸುಮಾರು 7 ವರ್ಷದ ಹಿಂದೆ 8ನೇ ಆರೋಪಿಯು ಶ್ರೀನಿವಾಸ್ ನೊಂದಿಗೆ ಜಗಳ ಮಾಡಿಕೊಂಡು ಬಂದಿದ್ದಳು ಎಂಬ ವಿಷಯವನ್ನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ನಾನು ಹೇಳಿಲ್ಲ ಎಂದರೆ ಸರಿಯಲ್ಲ. 8 ತಿಂಗಳ ಅವಧಿಯಲ್ಲಿ ಪೊಲೀಸರು ಹಲವಾರು ಸಾರಿ ಊರಿಗೆ ಬಂದು ವಿಚಾರಣೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆ 8 ತಿಂಗಳ ಅವಧಿಯಲ್ಲಿ ನಾನಾಗಿಯೇ ಹೋಗಿ ಪೊಲೀಸರಿಗೆ ಪಿರ್ಯಾದಿಯನ್ನಾಗಲೀ, ಹೇಳಿಕೆಯನ್ನಾಗಲೀ ನೀಡಿಲ್ಲ. ನನ್ನನ್ನು ಪೊಲೀಸರು ಕರೆದುಕೊಂಡು ಹೋಗಿದ್ದರು ಮತ್ತು ನಾನು ಶವವನ್ನು ನೋಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಕೊಲೆ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು